<u>**ಸಾಕ್ಷಿಗೆ ದಿನಾಂಕ *10-09-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ ಎಲ್ ಆರ್ ಎನ್ ವಕೀಲರಿಂದಃ**

ನಾನು ಮೃತ ಜಗದೀಶ ರವರಿಗೆ *12* ಲಕ್ಷ ರೂ.ಗಳನ್ನು ನಗದು ಹಣದ ರೂಪದಲ್ಲಿ ಕೊಟ್ಟಿರುತ್ತೇನೆ. ನಾನು ಅವರಿಗೆ ಸದರಿ ಹಣವನ್ನು *2* ಸಲ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಯಾವ ದಿನಾಂಕಗಳಂದು ಕೊಟ್ಟಿರುತ್ತೇನೆ ಎಂದು ನೆನಪು ಇರುವುದಿಲ್ಲ. ಖರೀದಿ ಕರಾರು ಪತ್ರದಲ್ಲಿ ಯಾವ ದಿನಾಂಕಗಳಂದು ಕೊಟ್ಟಿರುತ್ತೇನೆ ಎಂದು ನಮೂದಿಸಿರುವುದಿಲ್ಲ. ಖರೀದಿ ಕರಾರು ಪತ್ರ ಬರೆಯುವ ಒಂದು ತಿಂಗಳ ಮೊದಲು ಹಣ ಕೊಟ್ಟಿರುತ್ತೇನೆ. ಮೃತ ಜಗದೀಶ ರವರ ಕಡೆಗೆ ಎರಡು ಬಾರಿ ಹಣ ಕೊಟ್ಟಿರುವ ಬಗ್ಗೆ ಯಾವುದೇ ರಶೀದಿಯನ್ನು ಪಡೆದುಕೊಂಡಿರುವುದಿಲ್ಲ. ನಾನು ಯಾವುದೇ ಹಣವನ್ನು ಕೊಡದೇ ಇರುವುದರಿಂದ ಯಾವ ದಿನಾಂಕಗಳಂದು ಕೊಟ್ಟಿರುತ್ತೇನೆ ಎಂದು ನೆನಪಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೂಲ ಕಸುಬು ವ್ಯವಸಾಯ ಎಂದರೆ ಸಾಕ್ಷಿದಾರರು ನಾನು ವ್ಯವಸಾಯ ಮತ್ತು ಕಾಂಟ್ರ್ಯಾಕ್ಟರ ಕೆಲಸವನ್ನು ಮಾಡುತ್ತೇನೆ ಎಂದು ಹೇಳುತ್ತಾರೆ. ನಾನು ಕಾಂಟ್ರ್ಯಾಕ್ಟರ ಕೆಲಸವನ್ನು ಮಾಡುವುದಕ್ಕೆ ಸಕ್ಷಮ ಪ್ರಾಧಿಕಾರದಿಂದ ಲೈಸನ್ಸನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ನಾನು ಸಬ್ ಕಾಂಟ್ರ್ಯಾಕ್ಟರ ಕೆಲಸ ಮಾಡಲು ಲೈಸನ್ಸನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನಾನು ನಿಪಿ-*9* ರ ಪ್ರಕಾರ ಎಸ್ ಬಿ ಐ , ಬ್ಯಾಂಕ್ ಮತ್ತು ಪಿ ಕೆ ಪಿ ಎಸ್ ಬ್ಯಾಂಕಗಳಲ್ಲಿ ಸಾಲವನ್ನು ಪಡೆದುಕೊಂಡಿರುತ್ತೇನೆ. ನಾನೇ ಸಾಲಗಾರ ಆಗಿದ್ದರಿಂದ *12* ಲಕ್ಷ ರೂ.ಗಳ ಹಣವನ್ನು ಕೊಡಲು ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ವಕೀಲನಾಗಿದ್ದು, ಮೃತ ಜಗದೀಶ ರವರಿಗೆ ಖರೀದಿ ಕರಾರು ಪತ್ರವನ್ನು ಬರೆದುಕೊಡಲು ಅಧಿಕಾರ ಇದೇಯಾ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ನನ್ನ ಮಗನಿಗಾಗಲೇ ಅಥವಾ ಬೇರೆ ವಕೀಲರಿಗಾಗಲೀ ಕೇಳಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ಹೇಳುತ್ತಾರೆ. ಮೃತ ಜಗದೀಶ ರವರ ಕಡೆಯಿಂದ ನೇರವಾಗಿ ಕ್ರಯ ಪತ್ರವನ್ನು ಬರೆಸಿಕೊಳ್ಳಬಹುದಾಗಿತ್ತು. ಆದರೆ ಖರೀದಿ ಕರಾರು ಪತ್ರವನ್ನು ಏಕೆ ಬರೆಸಿಕೊಂಡಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಅವರು ತಡವಾಗಿ ಕ್ರಯ ಪತ್ರವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದರಿಂದ ಖರೀದಿ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಮೃತ ಜಗದೀಶ ರವರಿಗೆ ಕ್ರಯ ಪತ್ರವನ್ನು ಮಾಡಿಕೊಡಲು ಅಧಿಕಾರ ಇಲ್ಲ ಎಂದು ಗೊತ್ತಾಗಿದ್ದರಿಂದ ಖರೀದಿ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರ ಆಗುವಾಗ ಮೃತ ಜಗದೀಶ ರವರ ಸಹೋದರಿ ಶಾರದಾ ರವರು ಮೂಲ ದಾವಾ ನಂ. *319/2012* ನ್ನು

ಸಲ್ಲಿಸಿದ್ದರಿಂದ ಮತ್ತು ಮೃತ ಜಗದೀಶ ರವರಿಗೆ ಕ್ರಯ ಪತ್ರವನ್ನು ಮಾಡಿಕೊಡಲು ಅಧಿಕಾರ ಇರದೇ ಇರುವುದರಿಂದ ಖರೀದಿ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಜಗದೀಶರವರಿಗೆ ದಾವಾ ಜಮೀನನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಮತ್ತು ನನ್ನಿಂದ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಶಾರದಾ ರವರಿಗೆ ಯಾವುದೇ ಆಸ್ತಿ ಹೋಗಬಾರದು ಎಂದು ಮತ್ತು ಮೂಲ ದಾವಾ ನಂ. *319/2012* ಇದು ಚಾಲ್ತಿ ಇದ್ದುದರಿಂದ ಅದನ್ನು ನೋಡಿಕೊಳ್ಳುತ್ತೇನೆ ಎಂದು ಹೇಳಿ ಮೃತ ಜಗದೀಶ ರವರಿಗೆ ಪುಸಲಾಯಿಸಿ ಅವರಿಂದ ಸದರಿ ಖರೀದಿ ಕರಾರು ಪತ್ರವನ್ನು ಯಾವುದೇ ಪ್ರತಿಫಲ ಇಲ್ಲದೆ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-*1* ಖರೀದಿ ಕರಾರು ಪತ್ರದಲ್ಲಿ ಇರುವ ಸಹಿ ನನ್ನದು. ಪ್ರತಿವಾದಿಯರ ಪರ ವಕೀಲರು ಸಾಕ್ಷಿದಾರರಿಗೆ ದಿನಾಂಕ *30-06-2016* ರಂದು ನಾನು ಮತ್ತು ನನ್ನ ಇಬ್ಬರು ಮಕ್ಕಳು ಮೃತ ಜಗದೀಶ ರವರಿಗೆ ಬರೆದುಕೊಟ್ಟ ಒಪ್ಪಿಗೆ ಪತ್ರವನ್ನು ತೋರಿಸಿದಾಗ ಸಾಕ್ಷಿದಾರರು ಅದನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ ಮತ್ತು ತಮ್ಮ ಮಕ್ಕಳ ಸಹಿಯನ್ನು ನೋಡಿ ಗುರುತಿಸಿರುವುದಿಲ್ಲ. ಆದ್ದರಿಂದ ಸದರಿ ದಾಖಲೆಯನ್ನು ನಿಡಿ-*1* ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಡಿ-*1* ಎ ಎಂದು ಗುರುತಿಸಲಾಯಿತು. ಸಂಗಮೇಶ ಶಂಕರಗೌಡ ದಾದ್ಮಿ ಇವರು ನನ್ನ ಮಗ. ಮಹಾಂತೇಶ ಶಂಕರಗೌಡ ದಾದ್ಮಿ ಇವರು ನನ್ನ ಮಗ. ಖರೀದಿ ಕರಾರು ಪತ್ರ ಆದ ನಂತರ ಕ್ರಯಪತ್ರವನ್ನು ಮಾಡಿ ಕೊಡಿ ಎಂದು ನೋಟೀಸ ಏನಾದರೂ ಕೊಟ್ಟಿದ್ದೀರಾ ಅಥವಾ ಕಾನೂನು ಕ್ರಮವನ್ನು ಕೈಗೊಂಡಿದ್ದೀರಾ ಎಂದರೆ ಸಾಕ್ಷಿದಾರರು ನೋಟೀಸ ಕೊಟ್ಟಿರುವುದಿಲ್ಲ ಮತ್ತು ಕಾನೂನು ಕ್ರಮವನ್ನು ಕೈಗೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಖರೀದಿ ಕರಾರು ಪತ್ರಕ್ಕೆ ಮೃತ ಜಗದೀಶ ರವರ ತಂದೆಯ ಸಹಿಯನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿದಾರರು ಅವರ ತಂದೆಯ ಸಹಿಯನ್ನು ತೆಗೆದುಕೊಂಡಿರುವುದಿಲ್ಲ ಮತ್ತು ಅವರ ತಂದೆಗೆ ಖರೀದಿ ಕರಾರು ಪತ್ರದ ಬಗ್ಗೆ ಮಾಹಿತಿ ಇತ್ತು ಎಂದು ಹೇಳುತ್ತಾರೆ. ಜಗದೀಶ ರವರು ತೀರಿಕೊಂಡ ನಂತರ ಅವರ ವಾರಸುದಾರರಿಗೆ ಖರೀದಿ ಕರಾರು ಪತ್ರವನ್ನು ಮೃತ ಜಗದೀಶ ರವರು ಬರೆದುಕೊಟ್ಟಿದ್ದಾರೆ ಮತ್ತು ಕ್ರಯ ಪತ್ರವನ್ನು ಮಾಡಿಕೊಡಿ ಎಂದು ಕೇಳಿರುತ್ತೇವೆ. ಜಗದೀಶ ರವರು ತೀರಿಕೊಂಡ ನಂತರ ಅವರ ವಾರಸುದಾರರಿಗೆ ಕೇಳಿದಾಗ ಅವರ ವಾರಸುದಾರರು ಖರೀದಿ ಕರಾರು ಪತ್ರವನ್ನು ಮೃತ ಜಗದೀಶ ರವರು ಮಾಡಿಕೊಟ್ಟಿರುವುದಿಲ್ಲ ಮತ್ತು ಯಾವುದೇ ಕ್ರಯ ಪತ್ರವನ್ನು ಮಾಡಿಕೊಡುವುದಿಲ್ಲ ಎಂದು ಹೇಳಿದ್ದರು ಎಂದರೆ ಸಾಕ್ಷಿದಾರರು ಜಗದೀಶ ರವರ ಹೆಂಡತಿಯು ನನಗೆ ಅವರ ಅಣ್ಣ ಮತ್ತು ಅವರ ತಂದೆಯನ್ನು ಕರೆಯಿಸಿ ಹಿರಿಯರ ಸಮಕ್ಷಮ

ಬಗೆಹರಿಸುತ್ತೇವೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಈ ರೀತಿ ಜಗದೀಶ ರವರ ಹೆಂಡತಿಯು ಹೇಳಿರುವುದಿಲ್ಲ ಮತ್ತು ಅವರು ಖಡಾ ಖಂಡಿತವಾಗಿ ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ.

ನಾನು ಹುನಗುಂದ ದಲ್ಲಿ ಹುಟ್ಟಿ ಬೆಳೆದಿದ್ದರಿಂದ ಶಂಕರಗೌಡ ದಾದ್ನಿ ಎಂಬ ಹೆಸರಿಗೆ ಯಾವುದಾದರೂ ರಜಿಸ್ಟರ ಪೋಸ್ಟ ಬಂದರೆ ನನಗೆ ಅದು ತಲುಪುತ್ತದೆ. ದಿನಾಂಕ *12-05-2020* ರಂದು ನಾನು ಸಂತೋಷ ವಿ ಪಾಟೀಲ ವಕೀಲರ ಮುಖಾಂತರ ಪ್ರತಿವಾದಿಯರಿಗೆ ನೋಟೀಸ ಕೊಡಿಸಿರುತ್ತೇನೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಿಪಿ-*4* ರಂದು ಪ್ರತಿವಾದಿಯರಿಗೆ ನೋಟೀಸ ನೀಡಿರುತ್ತೇನೆ. ಪ್ರತಿವಾದಿಯರು ನಾನು ಕೊಟ್ಟ ನೋಟೀಸಿಗೆ ಉತ್ತರವಾಗಿ ನನಗೆ ಮತ್ತು ನಮ್ಮ ವಕೀಲರಿಗೆ ಖರೀದಿ ಕರಾರು ಪತ್ರವನ್ನು ಜಗದೀಶ ರವರು ಮಾಡಿಕೊಟ್ಟಿರುವುದಿಲ್ಲ ಮತ್ತು ಕ್ರಯ ಪತ್ರವನ್ನು ಮಾಡಿಕೊಡುವುದಿಲ್ಲ ಎಂದು ರಿಪ್ಲೈ ನೋಟೀಸ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಯಾವುದೇ ರಿಪ್ಲೈ ನೋಟೀಸ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ರೀಪ್ಲೈ ನೋಟೀಸನಲ್ಲಿ ನಾನು ಮತ್ತು ನನ್ನ ಮಕ್ಕಳು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿದಾರರು ರಿಪ್ಲೈ ನೋಟೀಸ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ವಕೀಲರ ಮುಖಾಂತರ ನೋಟೀಸ ನೀಡಿದ ನಂತರ ಅದಕ್ಕೆ ಏನಾದರೂ ಉತ್ತರ ಬಂದಿದೆಯಾ ಎಂದು ನಮ್ಮ ವಕೀಲರಾದ ಎಸ್ ವಿ ಪಿ ರವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿದಾರರು ನಾನು ನೋಟೀಸ ಕೊಟ್ಟ ನಂತರ ಎಸ್ ವಿ ಪಿ ವಕೀಲರ ಬಳಿ ಹೋಗಿರುವುದಿಲ್ಲ ಎಂದು ಹೇಳುತ್ತಾರೆ. ನೋಟೀಸ ಕೊಟ್ಟ ನಂತರ ಎಸ್ ವಿ ಪಿ ವಕೀಲರನ್ನು ಈ ವರೆಗೂ ಭೇಟಿ ಆಗಿರುವುದಿಲ್ಲ. ಎಸ್ ವಿ ಪಿ ವಕೀಲರು ದೂರವಾಣಿ ಮುಖಾಂತರ ನನ್ನನ್ನು ಸಂಪರ್ಕಿಸಿದ್ದಾರಾ ಎಂದರೆ ಸಾಕ್ಷಿದಾರರು ಅವರು ಸಂಪರ್ಕಿಸಿರುವುದಿಲ್ಲ ಮತ್ತು ಅವರು ಸಿಂಧನೂರಿನಲ್ಲಿ ಇರುತ್ತಾರೆ ಮತ್ತು ನಾನು ಇಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ. ನಾನು ಹುನಗುಂದದ ವಕೀಲರಾದ ಎಸ್ ಎಸ್ ಟಿ ರವರಿಂದ ಪ್ರತಿವಾದಿಯರಿಗೆ ನೋಟೀಸ ಕೊಡಿಸಿರುತ್ತೇನೆ. ಎಸ್ ಎಸ್ ಟಿ ವಕೀಲರು ನೀಡಿದ ನೋಟೀಸಿಗೆ ಪ್ರತಿವಾದಿಯರು ಉತ್ತರ ಕೊಟ್ಟ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿದಾರರು ಅದು ನಮ್ಮ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ಪ್ರತಿವಾದಿಯರು ಕೊಟ್ಟ ಉತ್ತರದ ಬಗ್ಗೆ ನಮ್ಮ ವಕೀಲರು ನನಗೆ ಹೇಳಿರುತ್ತಾರೆ. ಪ್ರತಿವಾದಿಯರು ಕೊಟ್ಟ ಉತ್ತರದಲ್ಲಿ ಮೊದಲು ಕೊಟ್ಟ ಉತ್ತರದ ಅಂಶಗಳನ್ನು ಅಡಾಪ್ಟ ಮಾಡಿಕೊಂಡಿರುತ್ತೇನೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ದಿನಾಂಕ *12-05-2020* ರಂದು

ಕ್ರಯ ಪತ್ರವನ್ನು ಮಾಡಿಕೊಡಿ ಎಂದು ಪ್ರತಿವಾದಿಯರಿಗೆ ನೋಟೀಸ ಕೊಟ್ಟಾಗ ನನ್ನ ಬಳಿ 28 ಲಕ್ಷ ರೂ. ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ನನ್ನ ಹತ್ತಿರ ಬ್ಯಾಂಕ ಬ್ಯಾಲನ್ಸ ಇತ್ತು ಮತ್ತು ಎಸ್ ಬಿ ಐ ಪಾಸ್ ಪುಸ್ತಕವನ್ನು ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ. ದಾವಾ ಜಮೀನುಗಳ ಈಗಿನ ಮಾರುಕಟ್ಟೆ ಮೌಲ್ಯ 1 ವರೆ ಕೋಟಿ ರೂ. ಯಿಂದ 2 ಕೋಟಿ ರೂ. ಆಗುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 11 ಜಮೀನು ಮುದ್ದೆಬಿಹಾಳ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ಸದರಿ ಜಮೀನು ಹುನಗುಂದ ದಿಂದ 1 ವರೆ ಯಿಂದ 2 ಕಿ.ಮಿ ಅಂತರದಲ್ಲಿ ಇರುತ್ತದೆ ಎಂದರೆ ಸರಿ. 2016 ರಲ್ಲಿ ಸದರಿ ಜಮೀನಿಗೆ 1 ಕೋಟಿ ರೂ. ಗಿಂತಲೂ ಹೆಚ್ಚಿನ ಮೌಲ್ಯ ಇರುತ್ತದೆ ಎಂದರೆ ಸರಿಯಲ್ಲ. ಜಗದೀಶ ಮತ್ತು ಅವರ ತಂದೆ ತೀರಿಕೊಂಡ ನಂತರ ದಾವಾ ಜಮೀನುಗಳು ಬೆಳೆಯಿಂದ ಪ್ರತಿವಾದಿಯರಿಗೆ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಏನು ಆದಾಯ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಜಗದೀಶ ರವರು ತೀರಿಕೊಂಡ ನಂತರ 35 ಲಕ್ಷ ರೂ.ಗಳು ಬಂದಿದ್ದು ಮತ್ತು ನಾನು ಅವರಿಗೆ ಜೋಳ ಗೋದಿಯನ್ನು ಕೊಡುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿದಾರರು ಮುಂದುವರೆದು ಮೃತ ಜಗದೀಶ ರವರು ನನಗೆ ಒಟ್ಟು ಮೋಕ್ತಿಯಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾನು ಒಟ್ಟು ಮೋಕ್ತಿಯಾರ ಪತ್ರವನ್ನು ಹಾಜರು ಪಡಿಸುತ್ತೇನೆ. ಮೃತ ಜಗದೀಶ ರವರು ಯಾವುದೇ ಕಾಗದ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಮತ್ತು ಯಾವುದೇ ಪ್ರತಿಫಲ ಇಲ್ಲದೇ ನಾಮಕಾವಾಸ್ತೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದು ಮತ್ತು ಅದಕ್ಕೆ ಪ್ರತಿಯಾಗಿ ನಾನು ಮತ್ತು ನನ್ನ ಮಕ್ಕಳು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಮತ್ತು ಅದು ನಾಮಕಾವಾಸ್ತೆ ಕರಾರು ಪತ್ರಎಂದು ಗೊತ್ತಿರುವುದರಿಂದ ಅದನ್ನು ಕಾರ್ಯಗತ ಗೊಳಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಮೃತ ಜಗದೀಶರವರ ಸ್ವಯಾರ್ಜಿತ ಜಮೀನುಗಳು ಆಗಿರದೇ ಇರುವುದರಿಂದ ಅವರಿಗೆ ಖರೀದಿ ಕರಾರುಪತ್ರವನ್ನು ಬರೆದುಕೊಡುವ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಾಮಕಾವಾಸ್ತೆ ಖರೀದಿ ಕರಾರು ಪತ್ರವನ್ನು ದುರುಪಯೋಗ ಪಡಿಸಿಕೊಂಡು ಪ್ರತಿವಾದಿಯರ ಮೇಲೆ ಸುಳ್ಳುದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಜಗದೀಶರವರಿಗೆ ನಾನು 12 ಲಕ್ಷ ರೂ.ಗಳನ್ನು ಕೊಟ್ಟಿರುವುದಿಲ್ಲ ಮತ್ತು 12 ಲಕ್ಷ ರೂ.ಗಳನ್ನು ಪ್ರತಿವಾದಿಯರು ವಾಪಸ್ಸು ಕೊಡಲು ಆಗುವುದಿಲ್ಲ ಮತ್ತು ಅದು ನಾಮಕಾವಾಸ್ತೆ ಖರೀದಿ ಕರಾರು ಪತ್ರ ಆಗಿರುವುದರಿಂದ ಕ್ರಯ ಪತ್ರವನ್ನು ಮಾಡಿಕೊಡಲು ಪ್ರತಿವಾದಿಯರು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಮೂಲ ದಾವಾ ನಂ. 319/2012

ಚಾಲ್ತಿ ಇರುವುದು ನನಗೆ ಗೊತ್ತಿರುವುದರಿಂದ ಸದರಿ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಜಗದೀಶ ರವರಿಗೆ ಖರೀದಿ ಕರಾರು ಪತ್ರವನ್ನು ಮಾಡಿಕೊಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.